ಚಂದ ನೋಡುವುದಾಗಲಿ ಮಾಡಲಿಲ್ಲ. ಬದಲಾಗಿ ಈ ಮನೆಯ ಶಾಂತಿ ಕೆಡದಿದ್ದರೆ ಸಾಕು ಎಂದು ಮನಸ್ಸಿನಲ್ಲಿ ಕಾಣದ ದೇವರಲ್ಲಿ ಬೇಡುತ್ತಲೇ ಇದ್ದಳು.

ಈ ನಡುವೆ ಆ ಮನೆಗೆ ಗ್ರಹಣಕ್ಕೊಂದು ಗ್ರಹಣ ಬಡಿದ ಹಾಗೆ ಉಳುವವನಿಗೇ ಭೂಮಿ ಕಾಯ್ದೆ ಬಂದು ಇದ್ದ ಬದ್ದ ಜಮೀನಿನ ಮುಕ್ಕಾಲು ಭಾಗ ಗೇಣಿ ಮಕ್ಕಳ ಪಾಲಾಯಿತು. ಸೋಮಾರಿ ಮಕ್ಕಳ ನಕಾಶೆಯಂತೆ ದೊಡ್ಡ ಮನೆಯೊಂದು ಎಲ್ಲದಕ್ಕೂ ಸಾಕ್ಷಿಯಾಗಿ ಸುಮ್ಮನೆ ಉಳಿದುಕೊಂಡಿತು. ಹಾಗೆ ಅವರು ಗತ್ತು ಗೈರತ್ತನ್ನೆಲ್ಲ ಕಳೆದುಕೊಂಡ ಮೇಲೆ ಮನೆಯ ಪ್ರತಿಯೊಬ್ಬ ಸದಸ್ಯರೂ ಹೊರೆ ಎನ್ನುವಂತೆ ನಡೆದುಕೊಳ್ಳತೊಡಗಿದರು. ಅಜ್ಜಯ್ಯ ಮತ್ತು ಅಜ್ಜಮ್ಮನ ಸ್ಥಿತಿಯೂ ಇದಕ್ಕಿಂತ ಭಿನ್ನವಾಗಿರಲಿಲ್ಲ. ಒಂದು ಕಾಲಕ್ಕೆ ರಾಜನ ಹಾಗೆ ಮೆರೆದಿದ್ದ ಅಜ್ಜ ಅದೇ ನೋವಿನಲ್ಲಿ ಕಣ್ಮುಚ್ಚಿ ಬಿಟ್ಟ. ಇನ್ನು ಅಜ್ಜಮ್ಮ ತಿಂಗಳು ಕಳೆಯುವುದರೊಳಗಾಗಿ ಅವನ ದಾರಿಯನ್ನೇ ಹಿಡಿದಿದ್ದಳು. ಅವರು ಹೋದ ನಂತರದಲ್ಲಿ ಭಾಗೀರಥಿಗೆ ಅನಾಥ ಪ್ರಜ್ಞೆ ಇನ್ನಿಲ್ಲದಂತೆ ಕಾಡತೊಡಗಿತ್ತು. ಮೊದಲಿಗಿಂತಲೂ ಹೆಚ್ಚು ಮಾತನಾಡತೊಡಗಿದಳು. ತನ್ನ ಪಾಡಿಗೆ ತಾನು ಬಾಯಿಗೆ ಬಂದದ್ದನ್ನೆಲ್ಲ ಹರಟತೊಡಗಿದಳು. ಹಸು, ಕರು, ನಾಯಿ, ಬೆಕ್ಕು

